OS.No.121/2022
D.w-2

OS.No.121/2022
D.w-2

ದಿನಾಂಕ 11-04-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ವಿ.ಎಮ್.ಎಮ್ ವಕೀಲರಿಂದ.**

ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುತ್ತವೆ. ವಾದಿ ಮಲ್ಲಿಕಾರ್ಜುನ 05 ಜನ ಪ್ರತಿವಾದಿಯರ ವಿರುದ್ಧ ದಾವೆ ಸಲ್ಲಿಸಿರುತ್ತಾನೆ. ದಾವಾ ಜಮೀನು ಸರ್ವೆ ನಂಬರ 482 ಆಗಿರುತ್ತದೆ. ವಾದಿ ಮಲ್ಲಿಕಾರ್ಜುನ ತಂದೆಯ ಹೆಸರು ಹಂಪಣ್ಣ ಎಂದು ಇರುತ್ತದೆ. ವಾದಿ ಮಲ್ಲಿಕಾರ್ಜುನನ ತಾತನ ಹೆಸರು ಯಂಕಪ್ಪ ಎಂದು ಇರುತ್ತದೆ. ಯಂಕಪ್ಪ ಸಿರವಾರ ತಾಲೂಕಿನ ಬಾಗಲವಾಡ ಗ್ರಾಮದವನಾಗಿದ್ದು ಆತನ ತಾಯಿಯ ತವರು ಮನೆ ಮಸೀದಪೂರ ಆಗಿರುತ್ತದೆ. ಯಂಕಪ್ಪನಿಗೆ ಹಂಪಣ್ಣ ಒಬ್ಬನೇ ಮಗನಾಗಿರುತ್ತಾನೆ. ಯಂಕಪ್ಪನಿಗೆ ಬಾಗಲವಾಡ ಗ್ರಾಮದಲ್ಲಿ ಆಸ್ತಿಗಳನ್ನು ಹೊಂದಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಯಂಕಪ್ಪನಿಗೆ ಬಾಗಲವಾಡ ಸೀಮೆಯಲ್ಲಿ ಸರ್ವೆ ನಂಬರ 356 ರಲ್ಲಿ 11 ಎಕರೆ ಪಿತ್ರಾರ್ಜಿತ ಜಮೀನುಗಳು ಇದ್ದವು ಎಂದರೆ ಸರಿಯಲ್ಲ. ಸದರಿ ಬಾಗಲವಾಡ ಸೀಮೆಯಲ್ಲಿನ ಪಿತ್ರಾರ್ಜಿತ ಜಮೀನುಗಳನ್ನು 1981 ರಲ್ಲಿಯೇ ಮಾರಾಟ ಮಾಡಿ ಯಂಕಪ್ಪ ಮಸೀದಪುರ ಗ್ರಾಮದಲ್ಲಿ ದಾವಾ ಜಮೀನನ್ನು

ಕ್ರಯಕ್ಕೆ ಪಡೆದಿರುತ್ತಾನೆ ಎಂದರೆ ಸರಿಯಲ್ಲ. ಮಸೀದಾಪುರ ಗ್ರಾಮದಲ್ಲಿ 1982 ರಲ್ಲಿ ತನ್ನ ಸ್ವಂತ ಸಂಪಾದನೆಯಿಂದ ಪಿಂಚಣಿ ಹಣದ ಸಹಾಯದಿಂದ ದಾವಾ ಸ್ವತ್ತನ್ನು ಕ್ರಯಕ್ಕೆ ಯಂಕಪ್ಪ ಪಡೆದಿರುತ್ತಾನೆ. 1982 ರಲ್ಲಿ ಯಂಕಪ್ಪ ಸ್ವಂತ ಸಂಪಾದನೆಯಿಂದ ಮತ್ತು ಪಂಚಣಿ ಹಣದ ಆಧಾರದ ಮೇಲೆ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿಂಚಣಿ ಹಣ ಯಂಕಪ್ಪನಿಗೆ ಎಷ್ಟು ಬಂದಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಪಿಂಚಣಿ ಹಣವನ್ನು ಯಾವ ವರ್ಷ ಪಡೆದಿರುತ್ತಾನೆ ನನಗೆ ಹೇಳಲು ಬರುವುದಿಲ್ಲ. ಯಂಕಪ್ಪ ಪಿತ್ರಾರ್ಜಿತ ಜಮೀನು ಮಾರಿ ದಾವಾ ಸ್ವತ್ತನ್ನು ಖರೀದಿಸಿದ್ದರಿಂದ ವಾದಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇದೆ ಎಂದರೆ ಸಾಕ್ಷಿಯು ಮಲ್ಲಿಕಾರ್ಜುನ ಜನಿಸುವ ಪೂರ್ವದಲ್ಲಿಯೇ ಯಂಕಪ್ಪ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದರಿಂದ ಮಲ್ಲಿಕಾರ್ಜುನನಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳನ್ನು ಯಂಕಪ್ಪ 1990 ರಲ್ಲಿ ಮಾರಾಟ ಮಾಡಿರುತ್ತಾರೆ. ಯಂಕಪ್ಪ ದಾವಾ ಸ್ವತ್ತನ್ನು 4 ನೇ ಪ್ರತಿವಾದಿ ಲಕ್ಷ್ಮಣ ಇವರಿಗೆ ಮಾರಾಟ ಮಾಡಿರುತ್ತಾರೆ, ಸದರಿ ವಿಷಯ ನಿಮಗೆ ಹೇಗೆ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಕ್ರಯದ ಸಂದರ್ಭದಲ್ಲಿ ನಾನು ಹಾಜರಿದ್ದೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರಕ್ಕೆ ನಾನು ಸಾಕ್ಷಿದಾರ ಎಂದು ಸಹಿ ಮಾಡಿರುವುದಿಲ್ಲ. ಸದರಿ 4 ನೇ ಪ್ರತಿವಾದಿಯ ಹೆಸರಿಗೆ ಆದ ಕ್ರಯಪತ್ರದಲ್ಲಿ ಸಾಕ್ಷಿದಾರರು ಎಂದು ಶಿವಪ್ಪ ಮತ್ತು ಬಸವರಾಜಸ್ವಾಮಿ ಇವರು ಸಹಿ ಮಾಡಿರುತ್ತಾರೆ. ಸದರಿ ಶಿವಪ್ಪ ಮತ್ತು ಬಸವರಾಜ ಈಗಾಗಲೇ ಮೃತರಾಗಿರುತ್ತಾರೆ. ಸದರಿ ಜಮೀನನ್ನು ಲಕ್ಷ್ಮಣ 50,000/- ರೂ. ಗಳಿಗೆ ಮಾರಾಟ ಮಾಡಿರುತ್ತಾರೆ. ಸದರಿ ಲಕ್ಷ್ಮಣ ನನಗೆ ಮಾವನಾಗಬೇಕು. ಖರೀದಿ ಕಾಲಕ್ಕೆ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ವ್ಯವಹಾರಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 17-04-1991 ರಲ್ಲಿ ವಾದಿ ಮಲ್ಲಿಕಾರ್ಜುನ ಜನಿಸಿರುತ್ತಾನೆ ಎಂದರೆ ಸರಿ, ಸಾಕ್ಷಿ ಮುಂದುವರೆದು 1991 ರಲ್ಲಿ ವಾದಿ ಜನಿಸಿರುತ್ತಾನೆ 1992 ರಲ್ಲಿ ಕ್ರಯಪತ್ರ ಆಗಿದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ನನಗೆ ಸಂಬಂಧಿಕನಾದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.